

(2006), ನೀತು ಗಂಗಾಸ್ (2023), ಲವ್ಲಿನಾ ಬೊರ್ಗೊಹೈನ್ (2023), ಸವಿತಿ ಬೂರಾ (2023) ಹಾಗೂ ಜೈಸ್ಮಿನ್ ಲಾಂಬೊರಿಯಾ (2025) ಅವರು ಈ ಪಟ್ಟಿಯಲ್ಲಿದ್ದಾರೆ.

## ಬಾಲ್ಯದ ಬವಣೆ

ಮೀನಾಕ್ಷಿಯ ಬಾಲ್ಯವು ಬಡತನದ ಬವಣೆಗಳಿಂದ ಕೂಡಿತ್ತು. ಅಪ್ಪ, ಅಮ್ಮನಿಗೆ ಮೀನಾಕ್ಷಿ ನಾಲ್ಕನೇ ಪುತ್ರಿ. ರಿಕ್ಷಾ ಚಾಲನೆ ಮಾಡುವ ಅಪ್ಪನ ಆದಾಯದಲ್ಲಿ ಮನೆ ನಡೆಸುವುದೇ ಕಷ್ಟವಾಗಿದ್ದ ಕಾಲ ಅದು. ಅಪ್ಪ ತಡರಾತ್ರಿಯವರೆಗೂ ದುಡಿದು ಮನೆಗೆ ಮರಳುತ್ತಿದ್ದರು. ಪ್ರತಿದಿನ ಕುಟುಂಬ ನಿರ್ವಹಿಸುವುದೇ ಸವಾಲಾಗಿದ್ದ ದಿನಗಳಲ್ಲಿ ಯಾವುದೇ ದೊಡ್ಡ ಸಾಧನೆ ಕನಸು ಕಾಣುವುದೂ ದುಸ್ತರವಾಗಿತ್ತು.

ರೂರ್ಕಿಯಲ್ಲಿ ಕ್ರೀಡೆಗೆಂದು ಯಾವುದೇ ವಿಶೇಷ ಸೌಲಭ್ಯಗಳಿರಲಿಲ್ಲ. ದೂಳು ಹಾರುವ ಮೈದಾನ ಬಿಟ್ಟರೆ ಬೇರೇನೂ ಇರಲಿಲ್ಲ. ಆದರೆ ಒಲಿಂಪಿಕ್ಸ್‌ನಲ್ಲಿ ವಿಜೇಂದ್ರಸಿಂಗ್ ಬಾಕ್ಸಿಂಗ್‌ನಲ್ಲಿ ಪದಕ ಗೆದ್ದ ಸುದ್ದಿಯು 12 ವರ್ಷ ವಯಸ್ಸಿನ ಮೀನಾಕ್ಷಿಯನ್ನು ಆಕರ್ಷಿಸಿತು. ಬಾಕ್ಸಿಂಗ್ ಬಗ್ಗೆ ಕುತೂಹಲ ಗರಿಗೆದರಿತು.

ಅದೇ ಸಮಯಕ್ಕೆ ಊರಿನ ಸಮೀಪವಿದ್ದ ಶಹೀದ್ ಬಾತುನ್ ಸಿಂಗ್ ಮೈದಾನದಲ್ಲಿ ತರಬೇತಿಗಾಗಿ ಮಕ್ಕಳು ಬರುತ್ತಿರಲಿಲ್ಲ. ಮೀನಾಕ್ಷಿಯ ಆಸಕ್ತಿ ನೋಡಿದ ಅಲ್ಲಿಯ ಕೋಚ್ ವಿಜಯ್ ಹೂಡಾ ಅವರು ತಾವೇ ತರಬೇತಿ ನೀಡಲು ಆರಂಭಿಸಿದರು. ಮೀನಾಕ್ಷಿಯ ಚಿಕ್ಕಪ್ಪ ಮತ್ತು ಸಹೋದರರು ಕೂಡ ಬೆಂಬಲಕ್ಕೆ ನಿಂತರು. ಆರಂಭದಲ್ಲಿ ಮೀನಾಕ್ಷಿ ಬಾಕ್ಸಿಂಗ್ ಕಲಿಕೆಗೆ ಅಪ್ಪನ ಆಕ್ಷೇಪ ಇತ್ತು. ಆದರೆ ಕ್ರಮೇಣ ಅವರೂ ಮಗಳಿಗೆ ಆಸರೆಯಾಗಿ ನಿಂತರು. ಮೀನಾಕ್ಷಿಗೆ ಪೌಷ್ಟಿಕ ಆಹಾರ, ಹಣ್ಣು, ಎಮ್ಮೆ ಹಾಲು, ತುಪ್ಪ ಒದಗಿಸಲು ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ.

ಇನ್ನೊಂದೆಡೆ ಕೋಚ್ ಹೂಡಾ ಕೂಡ ಅಪಾರ ಆಸಕ್ತಿ, ಪರಿಶ್ರಮದಿಂದ ತರಬೇತಿ ನೀಡುತ್ತಿದ್ದರು.

'ನಾನು ಮೀನಾಕ್ಷಿ ಕೋಚ್ ಆಗಿ ಮಾರ್ಗದರ್ಶನ ಮಾಡುವ ಸಮಯದಲ್ಲಿ ವಿದ್ಯಾರ್ಥಿಯೂ ಆಗಬೇಕಾಯಿತು. ನೋಟ್‌ಬುಕ್‌ಗಳಲ್ಲಿ ಬಾಕ್ಸಿಂಗ್ ಕೌಶಲ, ವ್ಯಾಯಾಮಗಳ ಕುರಿತು ನೋಟ್ಸ್ ಮಾಡಿಕೊಳ್ಳುವುದು, ಪಂಚ್, ಫುಟ್‌ವರ್ಕ್‌ಗಳ ರೇಖಾಚಿತ್ರ ಬಿಡಿಸಿಟ್ಟುಕೊಂಡು ವಿವರಿಸುವುದು. ಯೂಟ್ಯೂಬ್‌ನಲ್ಲಿ ಬಾಕ್ಸಿಂಗ್ ತುಣುಕುಗಳನ್ನು ನೋಡುತ್ತಿದ್ದೆ. ಆ ಮೂಲಕ ಹೊಸತನ್ನು ಹೇಳಿಕೊಡುವ ಪ್ರಯತ್ನ ಮಾಡುತ್ತಿದ್ದೆ. ನಮ್ಮ ಪ್ರಯತ್ನಗಳನ್ನು ನೋಡಿ ಜನ ನಗುತ್ತಿದ್ದರು. ನಿಮಗೆ ಹುಚ್ಚು ಹಿಡಿದಿದೆಯೇ ಎಂದು ಪ್ರಶ್ನಿಸುತ್ತಿದ್ದರು. ಗ್ಲೌಸ್ ಮತ್ತು ಪ್ಯಾಡ್‌ಗಳನ್ನು ನನ್ನ ಉಳಿತಾಯದ ಹಣದಲ್ಲಿ ತಂದಿದ್ದೆ. ಕ್ರಮೇಣ ಬಾಕ್ಸಿಂಗ್ ಕಲಿಯಲು ಆಸಕ್ತಿ ತೋರಿದ ಊರಿನ ಹೆಣ್ಣುಮಕ್ಕಳಿಗೆ ತರಬೇತಿ ನೀಡಲು ಅವರ ಪಾಲಕರಿಂದ ಅನುಮತಿ ಪಡೆಯುವುದು ಕೂಡ ಸವಾಲಾಗಿತ್ತು' ಎಂದು ವಿಜಯ್ ಹೂಡಾ ಈಚೆಗೆ ಸಂದರ್ಶನವೊಂದರಲ್ಲಿ ಹೇಳಿದ್ದರು.

ಇದೆಲ್ಲದರ ನಡುವೆ ಮೀನಾಕ್ಷಿ ಮಾತ್ರ ಶ್ರದ್ಧೆ, ಛಲದಿಂದ ಅಭ್ಯಾಸ ಮಾಡಿದರು. ಅದಕ್ಕೆ ತಕ್ಕ ಪ್ರತಿಫಲ ಲಭಿಸಿತು. ಚುರುಕಾದ ಪಾದಚಲನೆ ಮತ್ತು ಮಿಂಚಿನ ವೇಗದ ಪಂಚ್‌ಗಳನ್ನು ಅಭ್ಯಾಸ ಮಾಡಿದರು. 2017ರಲ್ಲಿ ರಾಷ್ಟ್ರೀಯ ಸಬ್ ಜೂನಿಯರ್ ಬಾಕ್ಸಿಂಗ್ ಮತ್ತು ಖೇಲೊ ಇಂಡಿಯಾ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದರು. 2019ರಲ್ಲಿ ರಾಷ್ಟ್ರೀಯ ಯೂತ್ ಚಾಂಪಿಯನ್ ಕೂಡ ಆದರು. ಅದಾಗಿ ಎರಡು ವರ್ಷಗಳ ನಂತರ ರಾಷ್ಟ್ರೀಯ ಸೀನಿಯರ್ ವಿಭಾಗದಲ್ಲಿ ಬೆಳ್ಳಿಪದಕ ಜಯಿಸಿದರು. ಸಾಧನೆಯ ಒಂದೊಂದೇ ಮೆಟ್ಟಿಲು ಏರಿದಂತೆ ಪೈಪೋಟಿಯೂ ಹೆಚ್ಚಿತು. ತಮಗಿಂತ ಬಲಶಾಲಿ ಮತ್ತು ಅನುಭವಿಗಳ ಸವಾಲು ಎದುರಿಸಲು ಮತ್ತಷ್ಟು ಮಗದಷ್ಟು ಪರಿಶ್ರಮದ ತಾಲೀಮು ಮಾಡಿದರು.

2022ರಲ್ಲಿ ಏಷ್ಯನ್ ಅಮೆಚೂರ್ ಬಾಕ್ಸಿಂಗ್‌ನಲ್ಲಿ ಅವರ ಶ್ರಮಕ್ಕೆ ಫಲ ಸಿಕ್ಕಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಮೊದಲ ಪದಕ ಒಲಿಯಿತು. 52 ಕೆ.ಜಿ ವಿಭಾಗದಲ್ಲಿ ಬೆಳ್ಳಿ ಗೆದ್ದರು. ಇದರಿಂದಾಗಿ ಅವರಿಗೆ ಇಂಡೊ–ಟಿಬೇಟನ್ ಗಡಿ ಪೊಲೀಸ್ (ಐಟಿಬಿಪಿ) ಇಲಾಖೆಯಲ್ಲಿ ಉದ್ಯೋಗ ಲಭಿಸಿತು. ಇದರಿಂದಾಗಿ ಅವರಿಗೆ ಸಂಬಳ ಸೌಲಭ್ಯಗಳು ದೊರೆತವು. ಕುಟುಂಬಕ್ಕೆ ಆಸರೆಯಾದರು. ಅಪ್ಪನಿಗೆ ಹೊಸ ಆಟೊ ರಿಕ್ಷಾ ಖರೀದಿಸಿ ಕೊಟ್ಟರು.

2023 ಮತ್ತು 2024ರಲ್ಲಿ ರಾಷ್ಟ್ರೀಯ ಚಾಂಪಿಯನ್ ಆದರು. ಈ ವರ್ಷ 48 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲು ಸಿದ್ಧತೆ ಮಾಡಿಕೊಂಡರು. ಈ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿದ್ದ ನೀತು ಗಂಗಾಸ್ ಅವರನ್ನು ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸೋಲಿಸಿದರು. ಇದೇ ವರ್ಷ ವಿಶ್ವ ಬಾಕ್ಸಿಂಗ್ ಕಪ್ ಸ್ಪರ್ಧೆಯಲ್ಲಿ ಕಂಚು ಗೆದ್ದರು. ಈ ಎಲ್ಲ ಅನುಭವ ಮತ್ತು ಆತ್ಮವಿಶ್ವಾಸದೊಂದಿಗೆ ಲಿವರ್‌ಪೂಲ್ ವಿಮಾನವೇರಿದ್ದರು. ಅಲ್ಲಿಂದ ಚಿನ್ನದ ಪದಕ ಕೊರಳಿಗೇರಿಸಿಕೊಂಡು ಮರಳಿದ್ದಾರೆ. ಮುಂಬರುವ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಕನಸು ಅವರದ್ದು. ■

